

# ಕಳೆದ ದಿನಗಳ ನೆನಪುಗಳು



(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)

ಮೂಲ ಬಂಗಾಳಿ: **ಸ್ವಾಮಿ ಶ್ರದ್ಧಾನಂದ** ಅನುವಾದ: **ಪ್ರವ್ರಾಜಿಕಾ ಯೋಗಾತ್ಮಪ್ರಾಣಾ**

## ಭಾಗ ೪೯

ಅದೇ ಸೇವಕರನ್ನೊಮ್ಮೆ ವಿರಜಾನಂದರು ಶ್ಯಾಮಲಾತಾಲ್‌ನಲ್ಲಿ, ''ಏನಪ್ಪಾ, ಜಪ-ಧ್ಯಾನ ಮಾಡುತ್ತಿರುವೆಯಷ್ಟೆ?'' ಎಂದು ಕೇಳಿದ್ದರು. ಅಲ್ಲಿ ಆಗ ಸೇವಕರಿಗೆ ತುಂಬ ಕೆಲಸ. ಅಷ್ಟರವರೆಗೂ ಅವರು, 'ಗುರು ಮತ್ತು ಇಷ್ಟದೇವತೆ ಒಂದೇ ಆಗಿದ್ದೇ ಆದರೆ ಗುರುಸೇವೆ ಮಾಡಿದರೆ ಇಷ್ಟದೇವತೆಯ ಸೇವೆ ಮಾಡಿದಂತೆಯೇ, ಅಷ್ಟೇ ಸಾಕು' ಎಂದು ಮನದಲ್ಲಿ ಗಟ್ಟಿಮಾಡಿಕೊಂಡಿದ್ದರು. ಆದ್ದರಿಂದ ಜಪವನ್ನು ಕನಿಷ್ಠ ಎಷ್ಟು ಮಾಡಬೇಕೋ ಅಷ್ಟನ್ನೇ ಮಾಡುತ್ತಿದ್ದರು. ಮಹಾರಾಜರ ಪ್ರಶ್ನೆಗೆ, ''ಹ್ಞಾ! ಅಲ್ಪ-ಸ್ವಲ್ಪ ಮಾಡ್ತೀನಿ'' ಎಂದು ಉತ್ತರಿಸಿದರು. ಇದನ್ನು ಕೇಳಿ ಮಹಾರಾಜರು ತುಂಬ ಗಂಭೀರವಾಗಿಬಿಟ್ಟಿದ್ದರು. ''ನಾಳೆಯಿಂದ ಸಂಜೆಯ ವೇಳೆ ನೀನು ನನ್ನ ಯಾವುದೇ ಕೆಲಸ ಮಾಡಬೇಕಾಗಿಲ್ಲ. ದೇವರ ಮನೆಗೆ ಹೋಗಿ ಜಪಧ್ಯಾನ ಮಾಡಲು ಕುಳಿತುಕೋ. ನನ್ನ ಕೈಗೆ ಸಿಗುವಂತೆ ಗಂಗಾಜಲದ ಕಮಂಡಲು ಮತ್ತು ಜಪಮಾಲೆಯನ್ನು ಇಡು. ಎಂಟು ಗಂಟೆಗೆ ನಿನ್ನನ್ನು ಕರೆಯುವೆ ಆಗ ಬಾ'' ಎಂದರು.

ಭಕ್ತರೊಬ್ಬರ ನೆನಪು —

''ಜೂನ್ ೨, ೧೯೪೯. ಕೆಲವು ದಿನಗಳ ಹಿಂದೆ ಮಹಾರಾಜರು ಹೇಳಿದ್ದರು. ಪಟ್ಟಿಯಿರುವ ಹಗುರಾದ ಪಾದುಕೆಗಳಿದ್ದರೆ ಹಾಕಿಕೊಳ್ಳಬಹುದಾಗಿತ್ತು ಎಂದು. ಆ ಮಾತು ನೆನಪಾಗಿ, ಆ ರೀತಿಯ ಪಾದುಕೆಗಳನ್ನು ನಾನೇ ಸ್ವತಃ ತಯಾರಿಸಿ, ಕಾಗದದಲ್ಲಿ ಸುತ್ತಿಕೊಂಡು, ಬೆಳಗ್ಗೆ ೧೦ ಗಂಟೆ ಹೊತ್ತಿಗೆ ಬೇಲೂರು ಮಠಕ್ಕೆ ಹೋದೆ. ಮಹಾರಾಜರಿಗೆ ನನ್ನ ಕೈಯಿಂದಲೇ ತೊಡಿಸಬೇಕು ಎಂಬುದು ನನ್ನ ಇಚ್ಛೆ. ಅವರ ಕೊಠಡಿಗೆ ಹೋಗಿ ನೋಡಿದರೆ ೫-೬ ಜನ ಭಕ್ತರಿದ್ದರು, ಪಕ್ಕದಲ್ಲಿಯೇ ಸೇವಕ ಮಹಾರಾಜರೊಬ್ಬರು ನಿಂತಿದ್ದರು. ನಾನು ಮೆಲ್ಲಗೆ ಹೋಗಿ, ಎಲ್ಲರ ಹಿಂದೆ ಬಾಗಿಲ ಬಳಿ ನಿಂತೆ. ನನ್ನನ್ನು ನೋಡಿ ಸೇವಕ ಮಹಾರಾಜರು ಬಳಿಗೆ ಬಂದು ಮೆಲುದನಿಯಲ್ಲಿ, 'ಕಾಗದದಲ್ಲಿ ಸುತ್ತಿ ಏನನ್ನು ತಂದಿರಿ ಮತ್ತೆ? ಎಲ್ಲಿ ನೋಡೋಣ ಏನಿದೆ?' ಎಂದು ಕೇಳಿದರು. ವಿನೀತನಾಗಿ ಹೇಳಿದೆ, 'ಮಹಾರಾಜರಿಗೆಂದು ಪಟ್ಟಿ ಹಾಕಿರುವ ಪಾದುಕೆಗಳನ್ನು ತಂದಿರುವೆ, ತಿನ್ನುವ ಪದಾರ್ಥವೇನೂ ಇಲ್ಲ.'

''ತಿನ್ನುವ ಪದಾರ್ಥಗಳನ್ನು ಮಾತ್ರ ಮೊದಲು ಸೇವಕ ಮಹಾರಾಜರಿಗೆ ತೋರಿಸಿ, ನಂತರವೇ ಮಹಾರಾಜರ ಕೊಠಡಿಗೆ ತೆಗೆದುಕೊಂಡು ಹೋಗಬೇಕೆಂಬುದು ನನಗೆ ತಿಳಿದಿತ್ತು. ಆದರೆ ಮರದ ಪಾದುಕೆಗಳನ್ನು ಸೇವಕ ಮಹಾರಾಜರು ನೋಡಲು ಇಚ್ಛಿಸಿದರು. ತೋರಿಸಿದಾಗ ಸ್ವಲ್ಪ ಬೇಸರದಿಂದಲೇ, 'ಸುಮ್ಮಸುಮ್ಮನೆ ಏಕೆ ತಂದಿರಿ? ಇದನ್ನಿಟ್ಟುಕೊಂಡು ಮಹಾರಾಜರು ಏನು ಮಾಡುತ್ತಾರೆ? ಅಷ್ಟು ಭಾರವಿರುವುದನ್ನು ಹಾಕಿಕೊಳ್ಳಲು ಕೊಡಲಾಗುವುದಿಲ್ಲ. ಅವರು ಹಾಕಿಕೊಳ್ಳುವುದೂ ಇಲ್ಲ. ನೀವಿದನ್ನು ಹಿಂದಕ್ಕೆ ತೆಗೆದುಕೊಂಡು ಹೋಗಿ, ಹೊರಗಿಟ್ಟು ಬನ್ನಿ. ಅವರ ಮುಂದೆ ಅದನ್ನು ತೆಗೆದುಕೊಂಡು ಹೋಗಬೇಡಿ' ಎಂದುಬಿಟ್ಟರು.

''ಅವರ ಮಾತನ್ನು ಕೇಳಿ ಪಾತಾಳಕ್ಕಿಳಿದು ಹೋದೆ. ಸುಮ್ಮನೆ ನಿಂತಿದ್ದೆ. ಹಠಾತ್ತಾಗಿ ಮಹಾರಾಜರು ನನ್ನೆಡೆಗೆ ತಿರುಗಿ, 'ನಿನ್ನ ಕೈಯಲ್ಲಿ ಕಾಗದದಲ್ಲಿ ಸುತ್ತಿ ಏನು ತಂದಿರುವೆಯೋ ನೋಡೋಣ' ಎಂದರು. ನಾನು ಹಿಂಜರಿಯುತ್ತ ಕಾಗದ ತೆಗೆದು ಪಾದುಕೆಗಳನ್ನು ತೋರಿಸುತ್ತಲೇ, ಬೇಗ ಕೈಚಾಚಿ ತೆಗೆದುಕೊಂಡು, ಬೆರಗಿನಿಂದ ನೋಡುತ್ತ, 'ವಾಹ್! ವಾಹ್! ತುಂಬ ಚೆನ್ನಾಗಿದೆ, ಈ ತರಹದ ಪಾದುಕೆ ಪೇಟೆಯಲ್ಲಿ ಸಿಕ್ಕುವುದಿಲ್ಲ. ಇದು ನಿನಗೆಲ್ಲಿ ಸಿಕ್ಕಿತು?' ಎಂದರು. ವಿನೀತನಾಗಿ, 'ಅಪ್ಪಣೆ, ಇವುಗಳನ್ನು ನಾನೇ ನನ್ನ ಕೈಯಿಂದ ತಯಾರಿಸಿರುವೆ' ಎಂದೆ. ಮುಖವರಳಿಸಿ, 'ನೀನೇ ಸ್ವತಃ ತಯಾರಿಸಿರುವೆಯಾ! ವಾಹ್ ವಾಹ್! ಅದಕ್ಕೇ ಇಷ್ಟೊಂದು ಚೆನ್ನಾಗಿ ಆಗಿದೆ' ಎಂದು ಹೇಳಿದರು. ಸೇವಕರಿಗೆ, 'ಏನಪ್ಪಾ, ಇದನ್ನು ಜೋಪಾನವಾಗಿ ಎತ್ತಿಡು. ನಾನಿದನ್ನು ಶ್ಯಾಮಲಾತಾಲ್‌ಗೆ ಹೋಗಿ ಹಾಕಿಕೊಳ್ಳುವೆ' ಎಂದರು.

''ಈ ಘಟನೆಯನ್ನು ಕಣ್ಣಾರೆ ಕಂಡು ನಾನು ಆಶ್ಚರ್ಯದಿಂದ ಮೂಕನಾದೆ.''

ಮೇ ತಿಂಗಳು ಬಂದಾಗಿದೆ. ಚಿಕಿತ್ಸೆಗೆಂದು ಇನ್ನೂ ಎರಡು ತಿಂಗಳು ಬೇಲೂರು ಮಠದಲ್ಲೇ ಇರಬೇಕೆಂದು ವೈದ್ಯರು ಹೇಳಿದ್ದಾರೆ. ಭಕ್ತರಿಗೆ ಇದೊಂದು ಸುವರ್ಣಾವಕಾಶ. ಏಕೆಂದರೆ ಈ ಬಾರಿ ಮಹಾರಾಜರು ಇಲ್ಲಿದ್ದಾಗಲೇ ಬರುತ್ತಿರುವ ಅವರ ಜನ್ಮದಿನವನ್ನು ಆಚರಿಸಿ ಸಂಭ್ರಮ ಪಡಬಹುದು. ಇದರ ಮಧ್ಯೆ ವಿರಜಾನಂದರು ಒಂದು ದಿನ ರಹರಾದ ಬಾಲಕಾಶ್ರಮವನ್ನು ನೋಡಲು ಹೋದರು. ಸುಂದರವಾದ ರಂಗವಲ್ಲಿ ಬಿಡಿಸಿದ ಸೋಫಾವೊಂದರ ಮೇಲೆ ಅವರನ್ನು ಕುಳ್ಳಿರಿಸಿ, ಹೂವು, ಮಾಲೆ, ಧೂಪ ಮತ್ತು ಕರ್ಪೂರ ದೀಪ ಬೆಳಗಿ ಮಹಾರಾಜರನ್ನು ಸ್ವಾಗತಿಸಲಾಯಿತು. ೧೦-೧೨ ಬಾಲಕರು ಒಂದೊಂದು ಸಾಲಿನಲ್ಲಿ ಬಂದು ಮಠಾಧ್ಯಕ್ಷರಿಗೆ ಪ್ರಣಾಮ ಸಲ್ಲಿಸಿ ಅವರ ಆಶೀರ್ವಾದ

ವನ್ನು ಪಡೆದರು. ಆಗ ಬಾಲಕರ ಒಟ್ಟು ಸಂಖ್ಯೆ ಸುಮಾರು ೨೦೦ ಇತ್ತು. ತಳ್ಳುವ ಕುರ್ಚಿಯಲ್ಲಿ ಕುಳ್ಳಿರಿಸಿ, ಮಹಾರಾಜರನ್ನು ಆಶ್ರಮದ ಎಲ್ಲ ವಿಭಾಗಗಳಿಗೂ ಕರೆದೊಯ್ದು ತೋರಿಸಲಾಯಿತು. ಸ್ವಲ್ಪ ಹಣ್ಣು ಸಿಹಿ, ಶರಬತ್ತನ್ನು ಸ್ವೀಕರಿಸಿ ೧೨ ಗಂಟೆಯ ಹೊತ್ತಿಗೆ ಬೇಲೂರು ಮಠಕ್ಕೆ ಹಿಂತಿರುಗಿದರು.

ಮಠದ ಹಿರಿಯ ಟ್ರಸ್ಟಿಗಳಾದ ಸ್ವಾಮಿ ಶಾಂತಾನಂದರು (ಖಗೇನ್ ಮಹಾರಾಜ್) ಕಾಶಿಯಲ್ಲಿ ಕೆಲವು ಕಾಲದಿಂದ ಅಸ್ವಸ್ಥರಾಗಿದ್ದರು. ಚಿಕಿತ್ಸೆಗೆಂದು ಅವರನ್ನು ಮೇ ೨೭ (೧೯೬೪) ರಂದು ಮಠಕ್ಕೆ ಕರೆತರಲಾಯಿತು. ಮಾರನೆಯ ದಿನ ಸಂಜೆ ಮಹಾರಾಜರು ಗಾಲಿ ಕುರ್ಚಿಯಲ್ಲಿ ಕುಳಿತು ಅವರನ್ನು ಕಂಡು ಬಂದರು. ಅನಂತರದಲ್ಲಿ ಶಾಂತಾನಂದರು ಯಾದವಪುರದ ಆಸ್ಪತ್ರೆಯಲ್ಲಿರುವಾಗಲೂ ಸಹ ಮಹಾರಾಜರು ಆಗಾಗ ಅವರಿಗಾಗಿ ಹಣ್ಣು ಹಂಪಲು ಕೊಟ್ಟ ಕಳುಹಿಸಿ, ಅವರ ಆರೋಗ್ಯದ ಬಗ್ಗೆ ವಿಚಾರಿಸುತ್ತಿದ್ದರು.

ಜೂನ್ ೧೦ ರಂದು ಸ್ನಾನಯಾತ್ರೆಯ ದಿನ ವಿರಜಾನಂದರ ೭೬ನೇ ಜನ್ಮದಿನ. ಆಚರಣೆಗಾಗಿ ಬೇಲೂರು ಮಠದಲ್ಲಿ ಅನೇಕ ಭಕ್ತರು ನೆರೆದಿದ್ದರು. ಅಂದು ಮಹಾರಾಜರು ಸ್ನಾನ ಮುಗಿಸಿ, ಹೊಸ ಬಟ್ಟೆ ಧರಿಸಿ, ಮೊದಲು ಶ್ರೀರಾಮಕೃಷ್ಣ ಮಂದಿರದಲ್ಲಿ ಪುಷ್ಪಾಂಜಲಿ ಸಲ್ಲಿಸಿ, ಮಲ್ಲಿಗೆ ದಂಡೆಯ ಮಾಲೆಯನ್ನು ಅರ್ಪಿಸಿದರು. ನಂತರ ಶ್ರೀಮಾತೆಯವರ, ಸ್ವಾಮೀಜಿಯವರ ಮತ್ತು ರಾಜಾ ಮಹಾರಾಜರ ಮಂದಿರಗಳಲ್ಲೂ ಯಥಾರೀತಿ ಪುಷ್ಪಾಂಜಲಿ ಮಾಲೆಗಳನ್ನು ಸಮರ್ಪಿಸಿದರು. ಕೊಠಡಿಗೆ ಹಿಂತಿರುಗಿ ತಮ್ಮ ಬೆಳಗಿನ ಉಪಾಹಾರವನ್ನು ಮುಗಿಸಿದ ನಂತರ, ಮಠದ ಸಾಧು-ಬ್ರಹ್ಮಚಾರಿಗಳು ಅವರಿಗೆ ಪ್ರಣಾಮ ಸಲ್ಲಿಸಿದರು. ನಂತರ ಮಹಾರಾಜರು ಕೆಳಗಿನ ವರಾಂಡಾದಲ್ಲಿ ಒಂದೇ ಸಮನೆ ಮೂರೂವರೆ ಗಂಟೆಗಳ ಕಾಲ ಕುಳಿತು ನೆರೆದ ಭಕ್ತವೃಂದಕ್ಕೆ ದರ್ಶನವನ್ನಿತ್ತರು. ಅಂದು ಸುಮಾರು ಏಳು ಸಾವಿರ ಭಕ್ತರು ಅನ್ನಪ್ರಸಾದವನ್ನು ಸ್ವೀಕರಿಸಿದರು. ಮಹಾರಾಜರು ಪುರುಷರ ಮತ್ತು ಸ್ತ್ರೀಯರ ಪಂಕ್ತಿಗಳಿಗೆ ಹೋಗಿ, ಸುತ್ತು ಹಾಕಿ ಎಲ್ಲರನ್ನೂ ನೋಡಿ ಬಂದರು. ಆ ಸಮಯದಲ್ಲಿ ಮಹಾರಾಜರ ಕಣ್ಣುಗಳಲ್ಲಿ ಎಣೆಯಿಲ್ಲದ ವಾತ್ಸಲ್ಯವು ಅರಳಿ ನಿಂತಿತ್ತು. ಸಂಜೆಯೂ ಸಹ ಕೆಳಗಿಳಿದು ಬಂದು ಒಂದೂವರೆ ಗಂಟೆಗಳ ಕಾಲ ದರ್ಶನವಿತ್ತರು. ಮಠದ ನಿರ್ವಾಹಕರಾದ ಸ್ವಾಮಿ ಅಭಯಾನಂದಜಿ ಮತ್ತು ನಿರ್ವಾಣಾನಂದಜಿಯವರ ದಣಿವರಿಯದ ಪರಿಶ್ರಮ ಮತ್ತು ಸುವ್ಯವಸ್ಥೆಯಿಂದಾಗಿ ಭಕ್ತರ ಬಹು ಆಕಾಂಕ್ಷೆಯ ಈ ಆನಂದೋತ್ಸವವು ಸರ್ವರೀತಿಯಿಂದಲೂ ಸಫಲಗೊಂಡಿತ್ತು. ಬಂಗಾಳವಷ್ಟೇ ಅಲ್ಲದೆ ಚೆನ್ನೈ, ಮುಂಬೈ, ಉತ್ತರ ಪ್ರದೇಶ, ಪಂಜಾಬ್ ಮುಂತಾದ ದೂರದೂರ ಸ್ಥಳಗಳಿಂದಲೂ ಭಕ್ತರು ಬಂದಿದ್ದರು.

ಜೂನ್ ೨೬ರಂದು (೧೯೬೪) ಮಹಾರಾಜರು ಮತ್ತೆ ಶ್ಯಾಮಲಾತಾಲನ್ನು ತಲುಪಿದರು. ಈ ಬಾರಿ ಐದೂವರೆ ತಿಂಗಳು ಇಲ್ಲಿ ತಂಗಿದ್ದರು. ದಸರೆಯ ಮೊದಲು ಮತ್ತು ಅನಂತರ ಅನೇಕ ದರ್ಶನಾರ್ಥಿಗಳು, ದೀಕ್ಷಾರ್ಥಿಗಳು ನಾನಾ ಸ್ಥಳಗಳಿಂದ ಬಂದಿದ್ದರು. ಮೋಟಾರು ರಸ್ತೆಯಾಗಿದ್ದರಿಂದ ಭಕ್ತಾದಿಗಳು ಟನಕ್‌ಪುರದಿಂದ ಟ್ರಕ್ ಬಾಡಿಗೆಗೆ ತೆಗೆದುಕೊಂಡು ಸುಖೀಡಂಗ್‌ವರೆಗೆ ಬರುವ ವ್ಯವಸ್ಥೆ ಮಾಡಲು ಸಾಧ್ಯವಾಗಿತ್ತು.[೧] ಈ ಬಾರಿ ಮಹಾರಾಜರು ಶ್ಯಾಮಲಾತಾಲ್‌ಗೆ ಬರುವ ಮೊದಲು ಅವರಿಂದ ದೀಕ್ಷೆ ಪಡೆದಿದ್ದ ಗಾಯಕಿಯೊಬ್ಬರು ಅವರಿಗೆ ಒಂದು ಗ್ರಾಮಾಫೋನ್ ಮತ್ತು ಹಲವಾರು ಹೊಸ ರೆಕಾರ್ಡ್‌ಗಳನ್ನು ಉಡುಗೊರೆಯಾಗಿ ನೀಡಿದ್ದರು. ಮಹಾರಾಜರು ಶ್ಯಾಮಲಾತಾಲ್‌ನಲ್ಲಿ ಆಗಾಗ ಗ್ರಾಮಾಫೋನ್ ಹಾಕಿ ಕೇಳುತ್ತಿದ್ದರು.

ಆಗಸ್ಟ್ ೧೧ರಂದು ಸ್ವಾಮಿ ವಿಶ್ವೇಶ್ವರಾನಂದರು (ಕಪಿಲ್ ಮಹಾರಾಜ್) ತಮ್ಮ ೭೯ನೇ ವಯಸ್ಸಿನಲ್ಲಿ ಕಾಶೀ ಸೇವಾಶ್ರಮದಲ್ಲಿ ದೇಹತ್ಯಾಗ ಮಾಡಿದ್ದಾರೆ ಎಂಬ ಶೋಕ ಸಮಾಚಾರವು ಆಗಸ್ಟ್ ಕೊನೆಯಲ್ಲಿ ತಿಳಿದುಬಂತು. ಅವರು ೧೯೦೮ರಲ್ಲಿ ಬೇಲೂರು ಮಠವನ್ನು ಸೇರಿದ್ದರು. ಶ್ರೀಮಾತೆಯವರಿಂದ ಮಂತ್ರದೀಕ್ಷೆಯನ್ನು ಪಡೆದಿದ್ದರು. ಅನೇಕ ವರ್ಷ ಇವರು 'ಉದ್ಬೋಧನ' ಕಾರ್ಯಾಲಯದ ನಿರ್ವಾಹಕರಾಗಿ ದಕ್ಷತೆಯಿಂದ ಸೇವೆಗೈದಿದ್ದರು. ಅನಂತರದಲ್ಲಿ ಮುಖ್ಯತಃ ಪೂರ್ವ ಬಂಗಾಳದ (ಬಾಂಗ್ಲಾದೇಶ) ನಾನಾ ಸ್ಥಳಗಳಲ್ಲಿ ನೆಲೆಸಿ ಧರ್ಮ ಪ್ರಚಾರ ಮಾಡುತ್ತಿದ್ದರು. ಕಳೆದ ಎರಡು ವರ್ಷಗಳಿಂದ ಕಾಶೀ ಧಾಮದಲ್ಲಿ ಸಾಧನೆ ಮಾಡುತ್ತ ದಿನ ಕಳೆಯುತ್ತಿದ್ದರು.

ಎರಡು ತಿಂಗಳ ನಂತರ ಮತ್ತೊಂದು ವಿಷಾದದ ಸಂಗತಿ ಬಂತು. ಅಕ್ಟೋಬರ್ ೧೪ರಂದು ಮಿಸ್ ಜೋಸೆಫಿನ್ ಮ್ಯಾಕ್‌ಲಿಯಾಡ್ ಅಮೇರಿಕೆಯ ಲಾಸ್ ಏಂಜಲ್ಸ್ ನಗರದಲ್ಲಿ ತಮ್ಮ ಕೊನೆಯುಸಿರನ್ನೆಳೆದಿದ್ದರು. ಅವರಿಗಾಗ ೯೧ ವರ್ಷ ವಯಸ್ಸಾಗಿತ್ತು. ವಿವೇಕಾನಂದಗತ-ಪ್ರಾಣರಾಗಿದ್ದ, ಭಾರತದ ಒಳಿತನ್ನೇ ತಮ್ಮ ವ್ರತವನ್ನಾಗಿ ಮಾಡಿಕೊಂಡಿದ್ದ ಈ ಶ್ರೇಷ್ಠ ಮಹಿಳೆಯ ಬಗ್ಗೆ ವಿರಜಾನಂದರಿಗೆ ಅತ್ಯಂತ ಶ್ರದ್ಧಾ-ಭಕ್ತಿಗಳಿದ್ದವು. ನ್ಯೂಯಾರ್ಕಿನಿಂದ ಆಗಾಗ ಆಕೆಯು ವಿರಜಾನಂದರಿಗೆ ಸ್ಫೂರ್ತಿದಾಯಕವಾದ ಪತ್ರಗಳನ್ನು ಬರೆಯುತ್ತಿದ್ದರು. ಸ್ವಾಮೀಜಿಯವರು ತಮ್ಮ ಶಿಷ್ಯೆಯ ಬಗ್ಗೆ ತುಂಬ ಉತ್ಕೃಷ್ಟವಾದ ಅಭಿಪ್ರಾಯವನ್ನಿಟ್ಟುಕೊಂಡಿದ್ದರು. ''ಈಕೆಯು ರತ್ನ ಸದೃಶಳು. ಇವಳ ಅಂತರ್ಯ ಸದಾ ದಯೆಯಿಂದ ಕರಗುವಂತಹುದು'' ಎಂದಿದ್ದರು. ಮತ್ತೊಂದು ಕಡೆ ಸ್ವಾಮೀಜಿಯವರು ಮಿಸ್ ಮ್ಯಾಕ್‌ಲಿಯಾಡ್ ಸಂಬಂಧವಾಗಿ ''ಈಕೆಯು ರಾಷ್ಟ್ರನಾಯಕರಿಗೆ ಸರಿಸಮಳು. ಇವಳು ಒಂದು ರಾಜ್ಯಾಡಳಿತವನ್ನೇ ಮಾಡಬಲ್ಲಳು'' ಎಂದು ಬರೆದಿದ್ದರು.

---

೧ ಒಂದೂವರೆ ವರ್ಷದ ನಂತರ ಟನಕ್‌ಪುರದಿಂದ ಪಿಥೋರಾಗಡ್‌ವರೆಗೆ ನಿಯಮಿತವಾಗಿ ಬಸ್ ಸೇವೆಯು ಚಾಲ್ತಿಗೆ ಬಂತು.

ಡಿಸೆಂಬರ್ ೧೦, (೧೯೪೯) ರಂದು ಸ್ವಾಮಿ ವಿರಜಾನಂದರು ಬೇಲೂರು ಮಠಕ್ಕೆ ಹಿಂತಿರುಗಿದರು. ಎರಡು ದಿನಗಳ ನಂತರ ಶ್ರೀಮಾತೆಯವರ ಜನ್ಮತಿಥಿ, ಬೆಳಗ್ಗೆ ಎಲ್ಲ ಮಂದಿರಗಳಲ್ಲೂ ದರ್ಶನ, ಪ್ರಣಾಮ ಮುಗಿಸಿಬಂದರು. ಅಮೇರಿಕಾದಿಂದ ಮೂರು ತಿಂಗಳ ಹಿಂದೆ ಬಂದ ಸ್ವಾಮಿ ಪ್ರಭವಾನಂದರು, ಸ್ವಾಮಿ ವಿವಿದಿಶಾನಂದರು ಮತ್ತು ಸ್ವಾಮಿ ದೇವಾತ್ಮಾನಂದರು ಈಗ ಬೇಲೂರು ಮಠದಲ್ಲಿದ್ದರು. ಕೆಲವು ದಿನಗಳಲ್ಲೇ ಫಿಜಿ ಶಾಖಾ ಕೇಂದ್ರದ ಅಧ್ಯಕ್ಷರಾದ ಸ್ವಾಮಿ ರುದ್ರಾನಂದರೂ ಸಹ ಬಂದರು. ಬಹಳ ದಿನಗಳ ನಂತರ ಇವರನ್ನೆಲ್ಲ ಕಂಡ ವಿರಜಾನಂದರಿಗೆ ತುಂಬ ಸಂತೋಷವಾಯಿತು. ಡಿಸೆಂಬರ್ ೨೬ರಂದು ಮಠದ ತ್ರೈವಾರ್ಷಿಕ ಸಂನ್ಯಾಸಿ ಸಮ್ಮೇಳನವು ಆರಂಭವಾಯಿತು. ವಿದೇಶದಲ್ಲಿ ಪ್ರಚಾರಕಾರ್ಯಕ್ಕಾಗಿ ತಮ್ಮನ್ನು ಸಮರ್ಪಿಸಿಕೊಂಡಿ ರುವ ಸಂನ್ಯಾಸಿಗಳ ಉಪಸ್ಥಿತಿಯಿಂದಾಗಿ ಸಮ್ಮೇಳನವು ಕಳೆ ಕಟ್ಟಿತ್ತು. ಮೊದಲನೇ ದಿನ ಸ್ವಾಮಿ ವಿರಜಾನಂದರು ೨೦ ನಿಮಿಷ ಗಳ ತಮ್ಮ ಉದ್ಘಾಟನಾ ಭಾಷಣವನ್ನು ಓದಿದರು. ಸುಸ್ಪಷ್ಟವಾದ ಅವರ ಕಂಠದಲ್ಲಿ ಅನಾರೋಗ್ಯದ ಯಾವುದೇ ಕುರುಹಿರಲಿಲ್ಲ! ಇವರ ಭಾಷಣವು ಎಲ್ಲರ ಹೃದಯವನ್ನು ತಟ್ಟಿತ್ತು.

೧೯೫೦ನೇ ವರ್ಷ. ಶರೀರದ ಅಸ್ವಸ್ಥತೆಯು ಹೆಚ್ಚುತ್ತ ಹೋದಂತೆ ದರ್ಶನಾರ್ಥಿಗಳ, ದೀಕ್ಷಾರ್ಥಿಗಳ ಸಂಖ್ಯೆಯೂ ಹೆಚ್ಚುತ್ತಲಿದೆ. ಚಿಕಿತ್ಸೆ ನೀಡುತ್ತಿದ್ದ ವೈದ್ಯರೆಲ್ಲರೂ ಪೂರ್ಣ ವಿಶ್ರಾಂತಿ ಪಡೆಯುವಂತೆ ಮಹಾರಾಜರನ್ನು ತುಂಬ ಕೇಳಿಕೊಳ್ಳು ತ್ತಿದ್ದಾರೆ. ಆದರೆ ವಿರಜಾನಂದರು ತಮ್ಮ ಅಂತರ್ಯದಲ್ಲಿ ತಮ್ಮ ಚಿರವಿಶ್ರಾಂತಿಯ ದಿನವು ದೂರವೇನಿಲ್ಲವೆಂದೂ ಆದ್ದರಿಂದ ಇಲ್ಲಿಯ ವಿಶ್ರಾಂತಿಯ ಬಗ್ಗೆ ಲೆಕ್ಕಾಚಾರ ಹಾಕುವುದು ನಿರರ್ಥಕ ವೆಂಬುದನ್ನೂ ಮನಗಂಡಿದ್ದಾರೆ. ಆದ್ದರಿಂದ ಎಲ್ಲರ ಒತ್ತಾಯ-ಕೋರಿಕೆಗಳಿಗೆ ಸ್ಪಂದಿಸಿ ಅವುಗಳನ್ನು ಈಡೇರಿಸುತ್ತಿದ್ದಾರೆ. ಒಂದೊಂದು ದಿನ ದೀಕ್ಷಾರ್ಥಿಗಳ ಸಂಖ್ಯೆಯು ೭೦-೮೦ಕ್ಕೂ ಏರುತ್ತಿತ್ತು.[೨]

ಇಂಗ್ಲಿಷಿನ 'ಪರಮಾರ್ಥ ಪ್ರಸಂಗ' ದ ಅಮೇರಿಕನ್ ಸಂಸ್ಕ ರಣವನ್ನು ನ್ಯೂಯಾರ್ಕಿನ ಹಾರ್ಪ್‌ರ್ ಬ್ರದರ್ಸ್ Towards the Goal Supreme ಎಂಬ ಹೆಸರಿನಲ್ಲಿ ಪ್ರಕಟಿಸಿದ್ದರು. ಅದರ ಕೆಲವು ಪ್ರತಿಗಳನ್ನು ಮಠಕ್ಕೆ ಕಳುಹಿಸಿದ್ದಾರೆ. ಮಹಾರಾಜ ರಿಗೆ ನೋಡಿ ಮಹದಾನಂದವಾಗಿದೆ. ಜನವರಿ ೨೨ರಂದು ಸ್ವಾಮಿ ತ್ರಿಗುಣಾತೀತರ ಜನ್ಮದಿನ. ಅಂದು ಬ್ರಹ್ಮಚಾರಿ ಜ್ಞಾನ್ ಮಹಾರಾಜರು ಒಂದಷ್ಟು ದೊಡ್ಡ ಆಲೂಗಡ್ಡೆಗಳನ್ನು ಬೇಯಿಸಿ ಕೊಂಡು ಕರಿದು ಒಂದು ಹೊಸ ಖಾದ್ಯವನ್ನು ತಯಾರಿಸಿ ದೇವರಿಗೆ ನೈವೇದ್ಯ ಮಾಡಿದ್ದರು. ಅದನ್ನೊಂದನ್ನು ಮಠಾಧ್ಯಕ್ಷ ರಿಗೆ ಕಳುಹಿಸಿದರು. ಮಹಾರಾಜರು ಅದನ್ನು ತುಂಬ ಆಸ್ವಾದಿಸಿ ದರು. ಜ್ಞಾನ ಮಹಾರಾಜರು ವೃದ್ಧರಾಗಿದ್ದಾರೆ. ಕಣ್ಣು ಸಹ ಮಂದವಾಗಿದೆ. ಆದರವರ ಸ್ಮರಣ ಶಕ್ತಿ ಮಾತ್ರ ಅಸಾಧಾರಣ ವಾಗಿದೆ. ಎಲ್ಲರ ಬಗ್ಗೆ ಅವರಿಗಿದ್ದ ಪ್ರೀತಿಯೂ ಸಹ ಅದ್ಭುತವೇ. ವಿಶೇಷ ದಿನಗಳಲ್ಲಿ ಬ್ರಹ್ಮಚಾರಿಗಳೊಬ್ಬರ ಸಹಾಯಪಡೆದು ಮೇಲೆ ಹತ್ತಿ ಬಂದು ಮಹಾರಾಜರಿಗೆ ನಮಸ್ಕರಿಸಿ, ಮಾತನಾಡಿಸಿ ಕೊಂಡು ಹೋಗುತ್ತಿದ್ದರು. ಮಹಾರಾಜರೂ ಸಹ ಅವರೊಂದಿಗೆ ಸಾದರ ಸಂಭಾಷಣೆ ನಡೆಸಿ ಹಣ್ಣು ಹಂಪಲುಗಳನ್ನೋ ಒಳ್ಳೆಯ ವಸ್ತ್ರವನ್ನೋ ಉತ್ತರೀಯವನ್ನೋ ಕೊಡುತ್ತಿದ್ದರು. ಜ್ಞಾನ್ ಮಹಾ ರಾಜರು ಬಾಲಕನಂತೆ ಆನಂದದಿಂದ ಕುಣಿಯುತ್ತ ಪಡೆದ ಉಡುಗೊರೆಯನ್ನು ತಲೆಗೆ ಒತ್ತಿಕೊಳ್ಳುತ್ತಿದ್ದರು.

ಹರಿದ್ವಾರದಲ್ಲಿ ಕುಂಭಮೇಳ ಜರುಗುತ್ತಲಿದೆ. ಬೇಲೂರು ಮಠ ಮತ್ತು ಇತರ ಶಾಖಾಕೇಂದ್ರಗಳಿಂದ ಕುಂಭಸ್ನಾನಕ್ಕಾಗಿ ಸಂನ್ಯಾಸಿಗಳು ಗುಂಪುಗುಂಪಾಗಿ ಹರಿದ್ವಾರಕ್ಕೆ ಬರುತ್ತಿದ್ದಾರೆ. ಕಂಖಲ್ ಸೇವಾಶ್ರಮವು ಕುಂಭಮೇಳದಲ್ಲಿ ತಾತ್ಕಾಲಿಕವಾದ ಚಿಕಿತ್ಸಾ ಕೇಂದ್ರವನ್ನು ತೆಗೆದು ಲಕ್ಷಾಂತರ ರೋಗಿಗಳಿಗೆ ಉಪ ಚರಿಸುತ್ತಲಿದೆ. ಅಷ್ಟೇ ಅಲ್ಲದೆ ರಾಮಕೃಷ್ಣ ಸೇವಾಶ್ರಮದಲ್ಲಿ ಮಠದ ಸಾಧು ಮತ್ತು ಭಕ್ತರಿಗಾಗಿ ದೊಡ್ಡದೊಂದು ಆಶ್ರಯ ಶಿಬಿರವನ್ನೂ ತೆರೆದಿದೆ. ದಿನವೂ ಶಾಸ್ತ್ರವ್ಯಾಖ್ಯಾನ ಮತ್ತು ಭಜನೆಯ ಆಯೋಜನೆಯಾಗಿದೆ. ಒಂದು ದಿನ ಸೇವಾಶ್ರಮದ ವತಿಯಿಂದ ಒಂದು ದೊಡ್ಡ ಸಭೆಯು ಆಯೋಜಿಸಲ್ಪಟ್ಟಿದ್ದು, ಅಲ್ಲಿ ಶ್ರೀರಾಮಕೃಷ್ಣರ ಜೀವನ ಮತ್ತು ಉಪದೇಶಗಳ ಸಂಬಂಧ ವಾಗಿ ಚರ್ಚಿಸಲಾಯಿತು. ಕುಂಭಮೇಳಕ್ಕೆ ಬಂದಿದ್ದ ಏಳು ಜನ ಪ್ರಸಿದ್ಧ ಮಂಡಲೇಶ್ವರರು ಈ ಸಭೆಯಲ್ಲಿ ತಮ್ಮ ವಾಗ್ವೈಖರಿಯ ಮೂಲಕ ಯುಗಾವತಾರ ಶ್ರೀರಾಮಕೃಷ್ಣರ ಬಗೆಗಿನ ತಮ್ಮ ಶ್ರದ್ಧೆಯನ್ನು ಮುಕ್ತ ಕಂಠದಿಂದ ವ್ಯಕ್ತಪಡಿಸಿದರು. ಮಠದಲ್ಲಿದ್ದ ವಿರಜಾನಂದರಿಗೂ ಮೇಳದ ಎಲ್ಲ ಸಮಾಚಾರಗಳು ವಿವಿಧ ಮೂಲಗಳಿಂದ ತಲುಪುತ್ತಿತ್ತು. ಅವರಿಗೂ ಅದನ್ನೆಲ್ಲ ಕೇಳಿ ಸಮಾಧಾನವುಂಟಾಗುತ್ತಿದೆ.

ಸ್ವಾಮಿ ಯತೀಶ್ವರಾನಂದರು ಅನೇಕ ವರ್ಷಗಳನಂತರ ಭಾರತಕ್ಕೆ ಹಿಂತಿರುಗುತ್ತಿದ್ದಾರೆ (ಫೆ. ೧೯೫೦). ಎರಡನೇ ಮಹಾ ಯುದ್ಧದ ಹಲವು ವರ್ಷಗಳ ಮೊದಲು ಅವರು ವೇದಾಂತ ಪ್ರಚಾರಕ್ಕಾಗಿ ಜರ್ಮನಿಗೆ ಹೋಗಿದ್ದರು. ಯುದ್ಧದ ಸಮಯ ದಲ್ಲಿ ಪರಿಸ್ಥಿತಿಯು ಪ್ರತಿಕೂಲವಾಗಿದ್ದುದರಿಂದ ಅಮೇರಿಕೆಗೆ ಹೋಗಿ, ಫಿಲಿಡೆಲ್ಫಿಯಾದಲ್ಲಿ ವೇದಾಂತ ಪ್ರಚಾರದ ಕಾರ್ಯ ವನ್ನು ಕೈಗೊಂಡಿದ್ದರು. ಇವರ ಆಗಮನದಿಂದ ಮಠದಲ್ಲಿ ಎಲ್ಲರೂ ಸಂತೋಷಗೊಂಡರು. ದಿನವೂ ಅವರು ಮಹಾರಾಜರ ಕೊಠಡಿಗೆ ಹೋಗಿ ಅವರೊಂದಿಗೆ ಮಾತನಾಡಿ ಬರುತ್ತಿದ್ದರು.

೧೯೫೦ರ ಫೆಬ್ರವರಿಯ ಮಧ್ಯಭಾಗದಲ್ಲಿ ಢಾಕಾ ಮತ್ತು ಇನ್ನಿತರ ಸ್ಥಳಗಳಲ್ಲಿ ಹಿಂದೂಗಳ ಮೇಲೆ ನಡೆಯುತ್ತಿದ್ದ ದಾರುಣ

---

೨ ಮಾರ್ಚ್ ೨೦ ರಂದು ಮಹಾರಾಜರು ೮೫ ಮಂದಿ ದೀಕ್ಷಾರ್ಥಿಗಳಿಗೆ ಮಂತ್ರ ದೀಕ್ಷೆ ನೀಡಿದರು. ಮಾರ್ಚ್ ೨೪ ರಂದು ೮೨ ಮಂದಿ ದೀಕ್ಷಾರ್ಥಿಗಳಿಗೆ ದೀಕ್ಷೆ ನೀಡಲು ಸುಮಾರು ಮೂರೂವರೆ ಗಂಟೆಗಳ ಕಾಲ ಆಸನದಲ್ಲಿ ಕುಳಿತಿದ್ದರು.

ಅತ್ಯಾಚಾರದ ಬಗ್ಗೆ ಸಮಾಚಾರಗಳು ಬಂದವು. ಸಾವಿರಾರು ಜನರು ತಮ್ಮ ಸರ್ವಸ್ವವನ್ನೂ ಕಳೆದುಕೊಂಡು ಪಶ್ಚಿಮವಂಗಕ್ಕೆ ಬರಲಾರಂಭಿಸಿದರು. ಸ್ವಾಮಿ ಪರಮಾನಂದರಿಂದ ಸ್ಥಾಪಿತವಾಗಿದ್ದ ಢಾಕಾದ ಆನಂದ ಆಶ್ರಮವನ್ನೂ ಸಹ ಕೊಲ್ಕತ್ತೆಗೆ ಸ್ಥಳಾಂತರಿಸಬೇಕಾಯಿತು. ಇದನ್ನೆಲ್ಲ ಕೇಳಿ ವಿರಜಾನಂದರಿಗೆ ಮರ್ಮಾಘಾತವಾಯಿತು. ಅಲ್ಲಿಂದೀಚೆಗೆ ಮಿಷನ್ ನಾನಾ ರೀತಿಯ ಪ್ರತಿಕೂಲ ಸನ್ನಿವೇಶಗಳ ಮಧ್ಯೆ, ಅನೇಕ ದಿನಗಳವರೆಗೆ ನಿರಾಶ್ರಿತರಿಗೆ ತಮ್ಮ ಸೇವಾಕಾರ್ಯವನ್ನು ಮುಂದುವರಿಸಿತು.

ಫೆಬ್ರವರಿ ೧೮ರಂದು ಶ್ರೀರಾಮಕೃಷ್ಣರ ಜನ್ಮತಿಥಿ. ವಿರಜಾನಂದರು ಗಾಲಿಕುರ್ಚಿಯಲ್ಲಿ ಕುಳಿತು ಮಂದಿರಗಳ ದರ್ಶನ ಮಾಡಿ ಬಂದರು. ಅಂದಿನ ರಾತ್ರಿ ೧೩ ಬ್ರಹ್ಮಚಾರಿಗಳು ಸಂನ್ಯಾಸ ದೀಕ್ಷೆಯನ್ನು, ೧೧ ವ್ರತಿಗಳು ಬ್ರಹ್ಮಚರ್ಯ ದೀಕ್ಷೆಯನ್ನೂ ಪಡೆದರು. ಇದಾದ ನಂತರ ಮಹಾರಾಜರು ಸುಮಾರು ಆರು ವಾರಗಳ ಕಾಲ ಮಠದಲ್ಲಿದ್ದರು. ದೀಕ್ಷಾದಿಗಳು ನಡೆಯುತ್ತಿದ್ದವು. ಮಠ ಮತ್ತು ಮಿಷನ್ನಿನ ಟ್ರಸ್ಟಿ ಮತ್ತು ಗವರ್ನಿಂಗ್ ಬಾಡಿ ಮೀಟಿಂಗ್‌ಗಳಲ್ಲಿ ಉಪಸ್ಥಿತರಿದ್ದು ಮಹಾರಾಜರು ಅನೇಕ ಮಹತ್ತ್ವಪೂರ್ಣ ವಿಷಯಗಳ ಸಂಬಂಧವಾಗಿ ತಮ್ಮ ಸಲಹೆಗಳನ್ನು ನೀಡಿದರು. ಮಾರ್ಚ್ ೨೭ರಂದು ಪಾಟ್ನಾದ ಮಾರ್ಗವಾಗಿ ಶ್ಯಾಮಲಾತಾಲ್‌ಗೆ ಹೊರಟರು.

ಏಪ್ರಿಲ್ ೨ ರಂದು ಶ್ಯಾಮಲಾತಾಲ್ ತಲುಪಿದರು. ಅಲ್ಲಿ ಕೇವಲ ಒಂದು ತಿಂಗಳು ಮಾತ್ರ ಇರಲಾಯಿತು. ರೋಗದ ಲಕ್ಷಣಗಳು ಆತಂಕ ಹುಟ್ಟಿಸುವಷ್ಟರ ಮಟ್ಟಿಗೆ ಹದಗೆಟ್ಟಿದ್ದರಿಂದ ಅವರು ಬೇಲೂರು ಮಠಕ್ಕೆ ಹಿಂತಿರುಗಲು ಅನುವಾದರು. ಮತ್ತೊಮ್ಮೆ ಬರಲಾರೆನೆಂಬುದೂ ಅವರಿಗೆ ತಿಳಿದಿತ್ತು. ಚೆನ್ನಾಗಿ ಸ್ನಾನ ಮಾಡಿ, ಊಟದ ಮನೆಯಲ್ಲಿ ಕುಳಿತು ಸಾವಧಾನವಾಗಿ ತಮ್ಮ ಆಹಾರ ಸ್ವೀಕರಿಸಿದರು. ಮಹಾರಾಜರು ತಂಗುತ್ತಿದ್ದ ಕೊಠಡಿಯಿಂದ ಕೊನೆಯ ಬಾರಿ ಹೊರಟರು; ಕೊಠಡಿ ನಿರಾಡಂಬರದಿಂದಿದ್ದರೂ, ಅದರ ಅಚ್ಚುಕಟ್ಟು ಹಾಗೆಯೇ ಉಳಿಯಿತು.

ಬಂಗಲೆಯ ಬಳಿ ದಂಡಿ ಹೊರುವವರು ಕಾದಿದ್ದರು. ಪಹಾಡಿಯ ಗ್ರಾಮವಾಸಿಗಳು ಮಹಾರಾಜರನ್ನು ಬೀಳ್ಕೊಡಲು ನೆರೆದಿದ್ದರು. 'ಬಡಾ ಮಹಾರಾಜ'ರ ದರ್ಶನ ಇದೇ ಕೊನೆಯದೆಂದು ಅವರಿಗೂ ತಿಳಿದಿತ್ತು. ಈಗ ವೇಳೆ ಎರಡು ಗಂಟೆ ಹತ್ತು ನಿಮಿಷ. ವಿರಜಾನಂದರು ನಿಧಾನವಾಗಿ ತಮ್ಮ ಕೊಠಡಿಯಿಂದ ಮಠದ ಮೆಟ್ಟಿಲುಗಳನ್ನಿಳಿದು ಕೆಳಗೆ ಬಂದರು. ಹಕ್ಕಿಯ ಕೂಜನವೊಂದು ಕೇಳಿಬರುತ್ತಿತ್ತು. 'ನೋಡಿದೆಯ? ಪಕ್ಷಿ ಎಷ್ಟು ಮಧುರವಾಗಿ ಕೂಗುತ್ತಿದೆ!' ಎಂದರು ಮಹಾರಾಜರು ಸೇವಕರಿಗೆ.

ವಿದಾಯ ಸಂಗೀತವು ವಿಶ್ವದಲ್ಲೇ ಅತ್ಯಂತ ಮಧುರಮಯವಾದ ಸಂಗೀತವೋ ಏನೋ! ಮಹಾರಾಜರು ನಿಧಾನವಾಗಿ ದಂಡಿಯನ್ನು ಹತ್ತಿದರು. 'ಜೈ ಗುರುಮಹಾರಾಜ್‌ಜೀ ಕೀ ಜೈ'' ಎಂದು ಧ್ವನಿಸಿ ವಾಹಕರು ದಂಡಿಯನ್ನು ಹೆಗಲಿಗೇರಿಸಿದರು. ದೇವದಾರು ಮರಗಳಿಂದ ಸುತ್ತುವರೆಯಲ್ಪಟ್ಟಿದ್ದ ಆ ಬಂಗಲೆಯು ಸ್ತಬ್ಧತೆಯಿಂದ ಮೂಕವಾಗಿ ಹಿಂದೆಯೇ ಉಳಿಯಿತು.

೨೪

೧೯೫೦ರ ಮೇ ೫ ರಿಂದ ೧೯೫೧ರ ಮೇ ೩೦ರವರೆಗಿನ ತಮ್ಮ ಜೀವನದ ಕೊನೆಯ ಒಂದು ವರ್ಷ, ೨೫ ದಿನಗಳನ್ನು ಮಹಾರಾಜರು ಬೇಲೂರು ಮಠದಲ್ಲಿಯೇ ಕಳೆದಿದ್ದರು. 'ಮಠದಲ್ಲಿ ನನ್ನ ಶರೀರ ಹೋಗಲಿ ಎಂಬುದೇ ನನ್ನ ಬಯಕೆ' ಎಂದು ಶ್ಯಾಮಲಾತಾಲ್‌ನಲ್ಲಿ ಹೇಳುತ್ತಿದ್ದುದುಂಟು. ನಿಬ್ಬೆರಗಾಗುವಂತಹ ತಾಳ್ಮೆಯಿಂದ ಈ ಸುದೀರ್ಘ ಸಮಯ ಮಹಾರಾಜರು ವ್ಯಾಧಿಯ ತೀವ್ರ ಯಾತನೆಯನ್ನು ನಗುಮುಖದಿಂದ ಸಹಿಸಿಕೊಂಡಿದ್ದರು.

ಬೇಲೂರು ಮಠಕ್ಕೆ ಬಂದ ಎರಡು ವಾರಗಳ ನಂತರ, ತಮ್ಮ ಸ್ನೇಹಿತರೂ, ಗುರುಭಾಯಿಯೂ ಆದ ಬೋಧಾನಂದರು ಮೇ ೧೮ರಂದು (೧೯೫೦) ನ್ಯೂಯಾರ್ಕಿನಲ್ಲಿ ತಮ್ಮ ದೇಹತ್ಯಾಗ ಮಾಡಿದ್ದಾರೆ ಎಂಬ ಸಮಾಚಾರ ತಿಳಿದುಬಂತು. ಅವರು ಕಳೆದ ಎರಡು ವರ್ಷಗಳಿಂದಲೂ ನಿಯತವಾಗಿ ವಿರಜಾನಂದರೊಂದಿಗೆ ಪತ್ರ ವ್ಯವಹಾರವನ್ನಿಟ್ಟುಕೊಂಡಿದ್ದರು. ತಮ್ಮ ಜೀವಿತದ ಕೊನೆಯ ದಿನಗಳನ್ನು ಭಾರತದಲ್ಲಿ ಕಳೆಯಬೇಕೆಂಬ ಇಚ್ಛೆಯನ್ನು ಅವರು ವ್ಯಕ್ತಪಡಿಸಿದ್ದರು. ಬೋಧಾನಂದರು ೧೮೯೭ರಲ್ಲಿ ಆಲಂಬಜಾರಿನ ಮಠಕ್ಕೆ ಸೇರಿದ್ದರು; ಅದೇ ವರ್ಷ ಸ್ವಾಮಿ ವಿವೇಕಾನಂದರಿಂದ ಸಂನ್ಯಾಸ ದೀಕ್ಷೆಯನ್ನು ಪಡೆದರು. ತೀವ್ರ ವೈರಾಗ್ಯ ಹಾಗೂ ನೇಮ ನಿಷ್ಠೆಯ ಸ್ವಭಾವದವರು. ೧೯೦೬ರಲ್ಲಿ ಪ್ರಚಾರ ಕಾರ್ಯಕ್ಕೆಂದು ಅಮೇರಿಕೆಗೆ ಹೋಗಿ, ೧೯೨೩ರಲ್ಲೊಮ್ಮೆ ಭಾರತಕ್ಕೆ ಬಂದಿದ್ದರು. ಮೇ ೩೦ರಂದು ಅವರ ನೆನಪಿನಲ್ಲಿ ಮಠದಲ್ಲಿ ವಿಶೇಷ ಪೂಜೆ, ಹೋಮ ಮತ್ತು ಸಾಧು ಭಂಡಾರವು ನಡೆಯಿತು. ದೇಹತ್ಯಾಗ ಮಾಡಿದ ಸಾಧುಗಳ ಭಂಡಾರಗಳಿಗೆ ವಿರಜಾನಂದರು ಯಾವಾಗಲೂ ಹಣ ಸಹಾಯ ಮಾಡುತ್ತಿದ್ದರು. ಈ ಬಾರಿ ಸ್ವಲ್ಪ ಹೆಚ್ಚಾಗಿಯೇ ಮಾಡಿದರು.

ಮಾರನೆಯ ದಿನವೇ (ಮೇ ೩೧, ೧೯೫೦) ಸ್ನಾನ ಯಾತ್ರೆ. ಮಹಾರಾಜರು ಮಠಕ್ಕೆ ಬಂದಾಗಿನಿಂದ ದರ್ಶನಾದಿಗಳು ನಿಂತು ಹೋಗಿದೆ. ಇಂದಾದರೂ ಕಡೇ ಪಕ್ಷ ಭಕ್ತರಿಗೆ ತಮ್ಮನ್ನು ನೋಡಲು ಅವಕಾಶವಿರಲಿ ಎಂಬುದೇ ಮಹಾರಾಜರ ಇಚ್ಛೆಯಾಗಿತ್ತು. ಬೆಳಗ್ಗೆ ಕೊಠಡಿಯಿಂದ ಕೆಳಗಿಳಿದು ಬಂದು ಮಠದ ಉತ್ತರಕ್ಕಿರುವ ಕಟ್ಟಡದ ಪ್ರಾಂಗಣದಲ್ಲಿ ಚಾಚು ಛಾವಣಿಯ ಕೆಳಗೆ ಒಂದೂವರೆ ಗಂಟೆಗಳ ಕಾಲ ಕುಳಿತಿದ್ದರು. ನೆರೆದಿದ್ದ ಭಕ್ತರೆಲ್ಲರೂ ಅವರಿಗೆ ಪ್ರಣಾಮ ಸಲ್ಲಿಸಿದರು. ಎಲ್ಲರಿಗೂ ದೊನ್ನೆ ಪ್ರಸಾದದ ವ್ಯವಸ್ಥೆಯಾಗಿತ್ತು. ಸಂಜೆಯೂ ಸಹ ದರ್ಶನ ನೀಡಬೇಕೆಂದುಕೊಂಡಿದ್ದರು; ಹಠಾತ್ತಾಗಿ ವೈಶಾಖ ಮಾಸದ ಬಿರುಗಾಳಿ ಮಳೆ ಬಂದದ್ದರಿಂದ ಕೆಳಗಿಳಿದು ಬರಲಾಗಲಿಲ್ಲ. ಆ ಹೊತ್ತು ಬಂದವರೆಲ್ಲ ಮಹಾರಾಜರ ಕೊಠಡಿಗೆ ಹತ್ತಿ ಹೋಗಿ ಅವರಿಗೆ ಪ್ರಣಾಮ ಸಲ್ಲಿಸಿ ಬಂದರು. ಇದೇ ಅವರ ಜನ್ಮದಿನದಂದು ಭಕ್ತರು ಸಲ್ಲಿಸಿದ ಕೊನೆಯ ಪ್ರಣಾಮವಾಯಿತು.